## ನೇರ ಪ್ರಸಾರ ಕಾರ್ಯಕ್ರಮ!

ಎಫ್.ಎಂ. ರೇಡಿಯೋ ಕೇಂದ್ರಕ್ಕೆ ಫೋನ್ ಮಾಡಿದ ಪಪ್ಪು 'ಇದು ಎಫ್.ಎಂ. ರೇಡಿಯೋ ತಾನೆ?' ಎಂದ. ರೇಡಿಯೋ ಜಾಕಿ ಹೌದೆಂದ. 'ನನ್ನ ಮಾತು ಪೂರ್ತಿ ಪಟ್ಟಣಕ್ಕೆ ಕೇಳಿಸುವುದೆ?' ಎಂದ. ಜಾಕಿ ಕೇಳಿಸುತ್ತದೆಯೆಂದ. 'ಮನೆಯಲ್ಲಿ ಎಫ್.ಎಂ. ಆಲಿಸುತ್ತಿರುವ ನನ್ನ ತಂಗಿಗೂ ಕೇಳಿಸುವುದೆ?' ಈ ಬಾರಿ ರೇಡಿಯೋ ಜಾಕಿ ಹೌದೆಂದು ಕೊಂಚ ಅಸಮಾಧಾನದಿಂದಲೇ ಹೇಳಿದ. ಪಪ್ಪು ನಿರಾಳತೆಯ ನಿಟ್ಟುಸಿರು ಬಿಡುತ್ತಾ ಉಸುರಿದ, 'ಹಲೋ ಪಿಂಕಿ, ನಾನು ನಿನ್ನಣ್ಣ ಪಪ್ಪು... ಎಫ್.ಎಂನಲ್ಲಿ ನನ್ನ ಧ್ವನಿ ಕೇಳಿಸುತ್ತಿದ್ದರೆ ತಕ್ಷಣ ಮೋಟಾರ್ ಚಾಲೂ ಮಾಡು. ನಾನು ಮಹಡಿ ಮೇಲಿನ ಟಾಯ್ಲೆಟ್ ನಲ್ಲಿದ್ದೇನೆ ಮತ್ತು ನೀರು ಖಾಲಿಯಾಗಿದೆ. ನಿನ್ನ ಫೋನ್ ಕೂಡಾ ಸ್ವಿಚ್ ಆಫ್ ಆಗಿರುವ ಹಾಗಿದೆ...' ರೇಡಿಯೋ ಜಾಕಿ ಆತನ ಸಮಯ ಪ್ರಜ್ಞೆಗೆ ಬೆರಗಾಗಿ ಹೋದ.

**ರಮಣ್ ಶೆಟ್ಟಿ ರೆಂಜಾಳ್**





ಕಲೆ: ಗಣೇಶ ಆಚಾರ್ಯ

## ಹಿಡೀರಿ...

ದಾರಿಯಲ್ಲಿ ಒಬ್ಬ ಮಹಿಳೆ 'ಹಿಡೀರಿ... ಹಿಡೀರಿ...' ಎಂದು ಕೂಗುತ್ತಾ ಒಬ್ಬನ ಹಿಂದೆ ಓಡುತ್ತಿದ್ದಳು. ಇದನ್ನು ಗಮನಿಸಿದ ಪೊಲೀಸ್ ಪೇದೆ ಓಡಿ ಹೋಗಿ ಆತನನ್ನು ಹಿಡಿದು ನಾಲ್ಕು ಬಾರಿಸಿದ. ಅಷ್ಟರಲ್ಲಿ ಅಲ್ಲಿಗೆ ಬಂದ ಮಹಿಳೆ 'ಸಾರ್ ಹೊಡಿಬೇಡಿ... ಅವರನ್ನು ಬಿಟ್ಟು ಬಿಡಿ...' ಎಂದಳು. 'ಹಿಡೀರಿ... ಹಿಡೀರಿ... ಅಂತ ಕೂಗಿದವಳು ನೀನೇ ಅಲ್ಲವೇನಮ್ಮ?' ಎಂದ ಪೊಲೀಸ್. 'ಸರ್ ಅವರು ನನ್ನ ಗಂಡ, ಮುಂದೆ ಬಸ್ ನಿಂತಿದೆ ಓಡಿ ಹೋಗಿ ಸೀಟು ಹಿಡಿರಿ ಅಂತ ಅವರನ್ನ ಮುಂದೆ ಓಡಿಸಿ ನಾನು ಹಿಂದೆ ಓಡ್ತಾ ಇದ್ದೀನಿ' ಎಂದಾಗ ಪೊಲೀಸ್ ಸುಸ್ತೋ ಸುಸ್ತು!

**ಶಂಕರೇಗೌಡ ತುಂಬಕೆರೆ**